SRI S. BANGARAPPA.—Madam Speaker, I beg to move :

"That under Rule 309 of the Rules of procedure the suspension order passed against Sri Vatal Nagaraj, hon. member of this House be terminated."

MADAM SPEAKER.—Let this not be a precedent. As a special case I agree to the Motion.

Motion moved :

"That under Rule 309 of the Rules of Procedure the suspension order passed against Sri Vatal Nagaraj, hon. member of this House be terminated."

The motion was adopted

EXPIRY OF TERM OF OFFICE OF BELGAUM MUNICIPALITY (Contd.)

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ರೂಲಿಂಗ್ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಆದರೆ ಮಾನ್ಯ ಸೈನಾಕ್ ಅವರು ಬೆಳಗಾಂ ಮುನಿಸಿಪಾಲಿಟಿಯ ಬಗ್ಗೆ ಒಂದು ಪ್ರಶ್ನೆ ಎತ್ತಿದ್ದಾರೆ. ಅದು ಬಹಳ ಗಹನವಾದ ವಿಷಯ. ಆ ಮುನಿಸಿಪಾಲಿಟಿಯ ಅವಧಿ ಮುಗಿದಿದ್ದರೂ ಸಹ ಮತ್ತೆ ೬ ತಿಂಗಳು ಎಕ್ಸ್‌ಟೆಂಡ್ ಮಾಡಿದ್ದಾರೆ. ಏತಕ್ಕೋಸ್ಕರ ಆ ರೀತಿ ಮಾಡಿದ್ದಾರೆಂಬ ಬಗ್ಗೆ ಸಮಂಜಸವಾದ ಉತ್ತರ ಕೊಟ್ಟರೆ ಒಳ್ಳೆಯದೂ ಮಾಸ್ಯ ಮಂತ್ರಿಗಳು ಸಹ ಇಲ್ಲಿರುವುದರಿಂದ ಉತ್ತರ ಕೊಡುವುದು ಒಳ್ಳೆಯದೂ.

ಅಧ್ಯಕ್ಷರು :—ಅದಕ್ಕೆ ಪ್ರೊಸಿಜರ್ ಬೇರೆ ಇದೆ. ಅದರ ಪ್ರಕಾರ ತೆಗೆದುಕೊಂಡು ಬರಬೆ. ಅವರು ಪ್ರೊಸಿಜರ್ ಪ್ರಕಾರ ನಡೆದುಕೊಳ್ಳದೆ ಧರಣಿ ಕುಳಿತುಕೊಂಡು ಬಿಟ್ಟರೆ ಮಂತ್ರಿಗಳು ಉತ್ತರ ಕೊಡುವುದಕ್ಕಾಗುವುದಿಲ್ಲ. ಇಂತಹ ಸಮಯದಲ್ಲಿ ಮಂತ್ರಿಗಳು ಉತ್ತರ ಕೊಡಬೇಕೆಂದು ಯಾವ ರೂಲ್ಸ್‌ನಲ್ಲಿಯೂ ಸಹ ಹೇಳಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ೧೪೬ ಮತ್ತು ೧೪೭ನೇ ರೂಲ್ಸ್ ಪ್ರಕಾರ ಮೋಷನ್ ಕಳಿಹಿಸಿಕೊಟ್ಟಿದ್ದೇನೆ. ಆ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಹುಶಃ.....

ಅಧ್ಯಕ್ಷರು.—ತಾವು ಏನು ಮೋಷನ್ ಕಳಿಹಿಸಿದ್ದೀರಿ ಅದನ್ನು ನಾನು ಮೊದಲು ಪರಿಶೀಲನೆ ಮಾಡುತ್ತೇನೆ.

SRI D. DEVARAJ URS.—The Chair may kindly look in to it, and we will abide by the Ruling.

MYSORE (BOMBAY AND HYDRABAD AREAS) RELIGIOUS AND CHRITABLE INAMS ABOLITION BILL, 1972 AS REPORTED BY THE JOINT SELECT COMMITTEE MOTION TO CONSIDER (DEBATE CONTINUED)

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಂಯುಕ್ತ ಪರಿಶೀಲನಾ ಸಮಿತಿಯ ವರದಿಯು ಈ ಸಭೆಯಮುಂದೆ ಚರ್ಚೆಗೆ ಬಂದಾಗ ಅನೇಕ ಮಾನ್ಯ ಸದಸ್ಯರು ಬಹಳ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ ಕೆಲವು ಮಾನ್ಯ ಸದಸ್ಯರು ಇದರಲ್ಲಿ ಪರ್ಸನೆಂಟ್ ಟಿನೆಂಟ್ಸ್, ಪ್ರೋಟೆಕ್ಟೆಡ್ ಟಿನೆಂಟ್ಸ್ ಮತ್ತು ಪೂಜಾರಿ ಪಂಥಿತರ ಟಿನೆಂಟ್ಸ್ ಏನಿದ್ದಾರೆ, ಇವರು